

ತಮ್ಮೊಂದಿಗೆ ಕರೆತಂದಿದ್ದ ದೇವೇಂದ್ರನ ರಥದ ಸಾರಥಿ ಮಾತಲಿಯನ್ನು ನಾಗರಾಜ ಆರ್ಯಕನಿಗೆ ಪರಿಚಯಿಸುತ್ತಾ ದೇವರ್ಷಿ ನಾರದರು ಹೇಳಿದರು: 'ಈತನ ಪರಿಚಯ ನಿನಗಿದೆಯೋ ಇಲ್ಲವೋ ಆರ್ಯಕ. ಈತ ದೇವೇಂದ್ರನ ರಥದ ಸಾರಥಿ, ಮಾತಲಿ. ಮಾತಲನ ಮಗ. ಲಂಕಾಧೀಶ ರಾವಣನೊಡನೆ ಶ್ರೀರಾಮಚಂದ್ರ ನಡೆಸಿದ ಯುದ್ಧದಲ್ಲಿ ಈ ಮಾತಲಿ ದೇವೇಂದ್ರನ ಆದೇಶದಂತೆ ಶ್ರೀರಾಮಚಂದ್ರನನ್ನು ತನ್ನ ರಥದಲ್ಲಿ ಕೂರಿಸಿಕೊಂಡು ತಾನು ಸಾರಥಿಯಾಗಿ ರಾವಣನ ಸಂಹಾರಕ್ಕೆ ಕಾರಣನಾಗಿದ್ದ. ನಿವಾತಕವಚರ ಹೋರಾಟದಲ್ಲಿಯೂ ಅರ್ಜುನನಿಗೆ ಈ ಮಾತಲಿ ಸಾರಥಿಯಾಗಿದ್ದ. ದೇವೇಂದ್ರನ ಕುಟುಂಬಕ್ಕೂ ಮಾತಲಿಯ ಕುಟುಂಬಕ್ಕೂ ಸಾರಥ್ಯದ ನಂಟು. ದೇವೇಂದ್ರನಿಗೆ ಮಾತಲಿ ಹೇಗೆ ಸಾರಥಿಯೋ ಹಾಗೆಯೇ ದೇವೇಂದ್ರನ ಮಗ ಜಯಂತನಿಗೆ ಮಾತಲಿಯ ಮಗ ಗೋಮುಖ ಸಾರಥಿ. ಆದ್ದರಿಂದಲೇ ದೇವೇಂದ್ರನಿಗೆ ಮಾತಲಿ ಹಾಗೂ ಈತನ ಕುಟುಂಬದ ಮೇಲೆ ಅಷ್ಟು ಮಮತೆ. ಈ ಮಾತಲಿಯ ಮಡದಿ ಸುಧರ್ಮೆ. ಆಕೆ ರೂಪವಂತಳು. ಗಂಡನಿಗೆ ಅನುರೂಪ ಭಾರ್ಯೆ. ಈ ದಂಪತಿಯ ಸುಖೀ ದಾಂಪತ್ಯದ ಫಲವೇ ಮಗಳು ಗುಣಕೇಶಿ ಹಾಗೂ ಮಗ ಗೋಮುಖ. ಗುಣಕೇಶಿ ಅತ್ಯಂತ ರೂಪವತಿ; ಗುಣವತಿ ಕೂಡ. ಸಕಲ ಶಸ್ತ್ರಶಾಸ್ತ್ರ ಪಾರಂಗತೆ. ಈಗ ಆಕೆಗೆ ಹದಿನಾರು ವರ್ಷ. ಮಗಳ ಮದುವೆಗೆ ತಂದೆ–ತಾಯಿ ಆಶಿಸುವುದರಲ್ಲಿ ತಪ್ಪೇನಿಲ್ಲವಷ್ಟೇ! ಸೌಂದರ್ಯವತಿಯೂ ಗುಣಶೀಲೆಯೂ ಆದ ಮಗಳಿಗೆ ಯೋಗ್ಯ ವರನನ್ನು ಹುಡುಕಲು ನಿರ್ಧರಿಸಿದ ಈ ಮಾತಲಿ. ತಾನು ದೇವೇಂದ್ರನ ಸಾರಥಿ. ತನ್ನ ಮಗಳಿಗೆ ಅಂತಿಂಥ ಗಂಡು ಆಗಲಿಕ್ಕಿಲ್ಲ ಎಂದುಕೊಂಡ ಈತ ಮಗಳಿಗೆ ಯೋಗ್ಯ ವರನನ್ನು ಹುಡುಕತೊಡಗಿದ. ಸುರಲೋಕದಲ್ಲಿ ಹುಡುಕಿದ್ದಾಯ್ತು. ಯಾರೂ ತನ್ನ ಮಗಳಿಗೆ ಯೋಗ್ಯ ವರ ಅಲ್ಲ ಎನ್ನಿಸಿತು ಈತನಿಗೆ. ಭೂಲೋಕದಲ್ಲಿಯೂ ಅರಸಿದ್ದಾಯ್ತು. ಯಾರೂ ಸಿಗಲಿಲ್ಲ. ಆಗ ಈತ ನನ್ನ ಬಳಿ ಬಂದ. ಈ ದೇವರ್ಷಿ ನಾರದರು ಎಷ್ಟೆಂದರೂ ಮೂರು ಲೋಕದ ವಾರ್ತಾ ವಿಶೇಷರು ತಾನೇ!'

ನಡುವೆಯೇ ಮಾತಲಿ ಹೇಳಿದ: 'ಇವರಿಗೆ ಗೊತ್ತಿಲ್ಲದಿರುವುದು ಏನುಂಟು? ಗೊತ್ತಿಲ್ಲದವರಾದರೂ ಯಾರು? ಇವರು ತಾವೇ ಸ್ವತಃ ಹೋಗಿ ವಿಷಯ ಸಂಗ್ರಹಿಸುತ್ತಾರೆಯೋ ಅಥವಾ ಬೇರೆಯವರಿಂದ ವಿಷಯ ಸಂಗ್ರಹಣೆ ಮಾಡುತ್ತಾರೆಯೋ ನನಗೆ ತಿಳಿಯದು. ಅಂತೂ ಇವರ ಗಮನಕ್ಕೆ ಬಾರದ ಸ್ಥಳಗಳಿಲ್ಲ; ವಿಚಾರಗಳಿಲ್ಲ. ಹೀಗೆಂದುಕೊಂಡ ನಾನು ಈ ನಾರದ ಮಹರ್ಷಿಗಳ ಬಳಿ ಹೋಗಿ ವಿಚಾರವನ್ನು ನಿವೇದಿಸಿಕೊಂಡೆ. ನಾರದರು ನನ್ನ ಮಾತನ್ನು ಕೇಳಿ ಮೊದಲಿಗೆ 'ಅಸಂಭವ... ಅಸಂಭವ' ಎಂದರು. 'ಯಾವುದು ಅಸಂಭವ ದೇವರ್ಷಿಗಳೇ? ನನ್ನ ಮಗಳಿಗೆ ಯೋಗ್ಯನಾದ ವರ ಸಿಗುವುದು ಅಸಂಭವವೇ? ತಾವು ನನ್ನ ಮಗಳಿಗಾಗಿ ವರಾನ್ವೇಷಣೆ ನಡೆಸುವುದು ಅಸಂಭವವೇ?' ಎಂದು ಕೇಳಿದೆ. ಅದಕ್ಕೆ ನಾರದರು 'ನಿನ್ನ ಮಗಳಿಗೆ ಯೋಗ್ಯನೂ ಸಮರ್ಥನೂ ಆದ ವರ ಸಿಗುವುದೇನೂ ಅಸಂಭವವಲ್ಲ ಮಾತಲಿ. ಒಂದು ಹೆಣ್ಣಿಗೆ ಒಂದು ಗಂಡು ಎಂದು ಆ ವಿಧಾತ ನಿರ್ಧರಿಸಿರುತ್ತಾನೆ. ಹಾಗೆ ಸಿಗುವ ಗಂಡು ಯೋಗ್ಯನೋ ಅಯೋಗ್ಯನೋ ಅದು ಬೇರೆಯದೇ ವಿಚಾರ. ಆ ಹೆಣ್ಣಿನ ಹಣೆಬರಹ ಅನ್ನು. ಮದುವೆಗೆ ಮುನ್ನ ಯೋಗ್ಯನೇ ಆಗಿದ್ದವ ಮದುವೆಯ ನಂತರ ಅಯೋಗ್ಯನಾಗಲಾರ ಎನ್ನುವಂತಿಲ್ಲ. ಅಂತೆಯೇ ಮದುವೆಗೆ ಮೊದಲು ತೀರಾ ಅಯೋಗ್ಯನಾಗಿದ್ದವ ಆ ಹೆಣ್ಣಿನ ಕಾರಣದಿಂದ ಯೋಗ್ಯನಾಗಿ ಪರಿವರ್ತಿತನೂ ಆಗಬಲ್ಲ. ವಿಷಯ ಅದಲ್ಲ. ನಾನು ನಿನ್ನ ಮಗಳ ಸಲುವಾಗಿ ವರನನ್ನು ಹುಡುಕುವುದು ಅಸಂಭವ ಎಂದೆ' ಎಂದು ತಮ್ಮ ತಂಬೂರಿಯ ತಂತಿಯನ್ನೊಮ್ಮೆ ಮೀಟುತ್ತಾ 'ನಾರಾಯಣ ನಾರಾಯಣ' ಎನ್ನುತ್ತಾ ನಾರದರು ಹೇಳಿದರು. 'ಯಾಕೆ?' ನಾನು ಕುತೂಹಲದಿಂದ ಕೇಳಿದೆ. 'ಹೇಳಿ ಕೇಳಿ ನಾನು ಆಜನ್ಮ ಬ್ರಹ್ಮಚಾರಿ. ನಾನು ಹುಡುಕಿಕೊಡುವ ಗಂಡು ನಿನಗೂ, ನಿನ್ನ ಮಡದಿಗೂ ಒಪ್ಪಿತವಾಗುತ್ತದೆಯೋ ಇಲ್ಲವೋ? ಮುಖ್ಯವಾಗಿ ನಾನು ಆರಿಸಿ ಸೂಚಿಸುವ ಆ ವರನನ್ನು ನಿನ್ನ ಮಗಳು ಗುಣಕೇಶಿ ಒಪ್ಪಬೇಕಷ್ಟೇ!'

ನಾನು ನನ್ನ ಪಟ್ಟು ಬಿಡಲಿಲ್ಲ. ಹೇಳಿದೆ: 'ಮೊದಲು ನೀವು ವರನನ್ನು ತೋರಿಸಿ ನಾರದರೇ. ಆಮೇಲೆ ಮುಂದಿನ ಮಾತು.'

ನನ್ನ ಒತ್ತಾಯಕ್ಕೆ ಮಣಿದು ನಾರದರು ವರಾನ್ವೇಷಣೆಗೆ ಹೊರಟರು.

ನಾವಿಬ್ಬರೂ ಪಾತಾಳ ಲೋಕ, ವರುಣ ಲೋಕ, ಹಿರಣ್ಯಪುರ, ಗರುಡ ಲೋಕ, ರಸಾತಲ ಮುಂತಾದ ಲೋಕಗಳಲ್ಲಿ ಸಂಚಾರ ಮಾಡಿದೆವು. ಆ ಯಾವ ಲೋಕದಲ್ಲಿಯೂ ನನ್ನ ಮಗಳು ಗುಣಕೇಶಿಗೆ ಸರಿಯಾದ ವರ ಸಿಗಲಿಲ್ಲ. ಕೊನೆಗೆ ಈ ನಿನ್ನ ನಾಗಲೋಕಕ್ಕೆ ಬಂದೆವು. ಈ ಹಿಂದೆ ನಾನು ಯಾವೊತ್ತೂ ಈ ನಾಗ ಲೋಕಕ್ಕೆ ಬಂದಿರಲಿಲ್ಲ. ನಿಮ್ಮ ವಂಶಸ್ಥರ ಯಾರ ಪರಿಚಯವೂ ನನಗಿರಲಿಲ್ಲ. ನಾರದರೇ ನಿನ್ನ, ನಿನ್ನ ರಾಜಧಾನಿಯ, ನಿನ್ನ ವಂಶಸ್ಥರ ಕುರಿತು ನನಗೆ ಎಲ್ಲಾ ವಿವರ ತಿಳಿಸಿದರು. ಭೋಗವತಿಯನ್ನು ರಾಜಧಾನಿಯಾಗಿ ಮಾಡಿಕೊಂಡಿರುವ ತಾವು ನಾಗರಾಜ ಆರ್ಯಕ... ನಮ್ಮ ದೇವೇಂದ್ರನ ಅಮರಾವತಿಯನ್ನೂ ಮೀರಿಸುವಂತಿದೆ ಈ ನಿಮ್ಮ ಭೋಗವತಿ ನಗರ. ಇಂಥ ಸುಂದರ ನಗರದ ದರ್ಶನವೂ ಆಯಿತು. ತಮ್ಮನ್ನು ಕಾಣುವ ಯೋಗವೂ ಲಭಿಸಿತು'' ಎಂದ ಸುರೇಂದ್ರನ ಸಾರಥಿ ಮಾತಲಿ ಮುಂದುವರಿದು, 'ನಾರದರೊಂದಿಗೆ ನಿಮ್ಮ ಈ ಸಭಾಸ್ಥಾನವನ್ನು ಪ್ರವೇಶಿಸಿದೆ. ತಕ್ಷಕ, ಕಾರ್ಕೋಟಕ, ಕಾಲಿಯ, ನಹುಷ, ಕಶ್ಯಪ ಹಾಗೂ ನಿಮ್ಮ ವಂಶೀಯರ ನಾಗರುಗಳನ್ನು ಕಂಡೆ. ಅವರೆಲ್ಲರ ಜೊತೆ ಅವರ ಮಕ್ಕಳೂ, ಮೊಮ್ಮಕ್ಕಳೂ ಇದ್ದರಲ್ಲಾ... ಅವರೆಲ್ಲರನ್ನೂ ಕಂಡೆ. ನಾರದರು ಅವರೆಲ್ಲರನ್ನೂ ನನಗೆ ಪರಿಚಯಿಸಿದರು. ಹಾಗೆಯೇ ನೀನು ಈ ಸಭೆಯನ್ನೊಮ್ಮೆ ಅವಲೋಕಿಸು ಮಾತಲಿ. ನಿನ್ನ ಮಗಳಿಗೆ ಅನುರೂಪನಾಗಿರುವ ಗಂಡು ಈ ಸಭೆಯಲ್ಲಿದ್ದಾನೆಯೋ ನೋಡು ಎಂದರು. ನಾರದರು ಹೇಳಿದಂತೆ ಸಭೆಯನ್ನೊಮ್ಮೆ ಅವಲೋಕಿಸಿದೆ. ಓರ್ವ ತರುಣ ನನ್ನ ದೃಷ್ಟಿಗೆ ಬಿದ್ದ. ಆ ತರುಣನ ರೂಪ, ಏಕಾಗ್ರತೆ, ಕಣ್ಣಿನ ದೃಷ್ಟಿ ನನ್ನನ್ನು ಆಕರ್ಷಿಸಿದವು. 'ಸ್ಫುರದ್ರೂಪಿಯಾದ ಆ ತರುಣ ಯಾರು ನಾರದರೇ?' ನಾನು ಕೇಳಿದೆ. ನಾರದರು ಆ ತರುಣನತ್ತ ದೃಷ್ಟಿ ಹರಿಸಿ ಹೇಳಿದರು: 'ಓಹ್... ಆತನಾ? ಅವನು ನಾಗರಾಜ ಈ ಆರ್ಯಕನ ಮೊಮ್ಮಗ. ಆತನ ಹೆಸರು ಸುಮುಖ. ಐರಾವತ ಕುಲದಲ್ಲಿ ಹುಟ್ಟಿದವನಾತ. ವಾಮನ ಎನ್ನುವವನ ಮಗಳ ಮಗ. ಈ ಸುಮುಖನ ತಂದೆ ನಾಗರಾಜ ಚಿಕುರ'.

ಸುಮುಖನನ್ನೇ ತನ್ನ ಅಳಿಯನನ್ನಾಗಿ ಮಾಡಿಕೊಳ್ಳಬೇಕೆಂದು ಅಷ್ಟರಲ್ಲಾಗಲೇ ಮಾತಲಿ ನಿರ್ಧರಿಸಿದ್ದ.

'ಸುಮುಖನ ಅಜ್ಜನ ಬಳಿ ಈ ವಿಷಯ ಪ್ರಸ್ತಾಪಿಸಿರಿ ನಾರದರೇ' ಎಂದು ನಾರದರತ್ತ ಬಾಗಿ ಪಿಸು ಧ್ವನಿಯಲ್ಲಿ ಅಂದ ಮಾತಲಿ. ನಾರದರು ಮುಗುಳ್ನಕ್ಕು ಆರ್ಯಕನತ್ತ ತಿರುಗಿ, 'ವಿಷಯ ಏನೂಂದರೆ ಆರ್ಯಕಾ... ಈ ಮಾತಲಿಗೆ ನಿಮ್ಮ ಕುಟುಂಬದೊಡನೆ ನೆಂಟಸ್ತಿಕೆ